# ಕಾಡಿನಲ್ಲಿ ನಾಡ ಹುಡುಗಿ

■ ಲಲಿತಾ ಕೆ. ಹೊಸಪ್ಯಾಟಿ

ನಾಡ ಹುಡುಗಿ ದಿಟ್ಟ ಬೆಡಗಿ
ಪಟ ಪಟನೇ ನಡೆದಳು
ಕಾಡಿನಲ್ಲಿ ನಾಡ ಹುಡುಗಿ
ಮೈ ಮರೆತು ನಿಂತಳು

ಸುತ್ತಮುತ್ತ ನೋಡಿದತ್ತ
ನೂರಾರು ಗಿಡಮರ
ದಳದಳನೇ ಉದುರಿ ಬಿದ್ದವು
ಹೂರಾಶಿ ತರತರ

ಹೂವಿನಾಸೆಗೆ ಹಾರಿ ಬಂದವು
ಸಾಲು ಸಾಲು ಚಿಟ್ಟೆಯು
ಜಂಬವಿಲ್ಲದೇ ತುಂಬಿ ತುಂಬಿ
ಮಧುವ ನೀಡಿವೆ ಹೂಗಳು

ಹಳದಿ ಬಣ್ಣದ ಹಕ್ಕಿಯೊಂದು
ಹಾರಿ ಬಂದಿತು ಬರ‍್ರನೇ
ಮುಗುಳ್ನಕ್ಕು ಮುಂದೆ ನಿಂತಿವೆ
ಪುಟ್ಟ ಮೊಲವು ಬೆಳ್ಳಗೆ

ಹಣ್ಣು ಕಿತ್ತು ತಿನ್ನುತಿತ್ತು
ಕೆಂಪು ಚುಂಚದ ಅರಗಿಳಿ
ಗಿಡಕೆ ಜೋತು ಬಿದ್ದ ಮಂಗ
ಜೀಕಿ ಕರೆಯಿತು ಬಾ ಬಳಿ

ಪ್ರತಿಮೆಯಂತೆ ಸುಮ್ಮನಿತ್ತು
ಕಬ್ಬಿಣದ ಆನೆ ಮರಿ
ಜಂಬೋಜೆಟ್ ವಿಮಾನದಂತೆ
ಹಾರಿ ಬಂತು ಹುಲಿಮರಿ

ಕಪ್ಪು ಕೂದಲ ಕರಡಿಕುಣಿತ
ಅಚ್ಚರಿಯೋ ಅಚ್ಚರಿ
ದರ್ಪ ಚಿರತೆ ಮುಂದೆ ನಿಂತರೂ
ಅಂಜದಲ್ಲ ಇಲಿ ಮರಿ

ಮುಳ್ಳು ಹಂದಿಗುಳ್ಳೆ ನರಿ
ಜೊತೆಗೆ ಕೂಡಿ ಕತ್ತೆಯು
ಉಳುಮೆ ಮಾಡೋ ಎತ್ತು ಬರಲು
ಮಾತುಕತೆ ಚಂದವು

ಸರಸರನೇ ಅಡ್ಡ ದಿಡ್ಡಿ ಹಾವು
ಹರಿಯಿತು ಮುಂದೆಯೇ
ಬೆನ್ನ ಹಿಂದೆ ಓಡಿ ಓಡಿ
ಮುಂಗುಸಿಗೆ ಸುಸ್ತು ಒಮ್ಮಲೇ

ಗಿರ ಗಿರನೆ ತಲೆ ತಿರುಗಿತು
ನೆತ್ತಿ ಮೇಲೆ ಸೂರ್ಯ
ಸುಲಿದು ಕೊಟ್ಟ ಏಲಕ್ಕಿ ಬಾಳೆ
ಬಾಳೆ ಗಿಡದ ಔದಾರ್ಯ

ದಿಡೀರನೇ ಕಾಡ ತುಂಬ
ಕೇಳಿ ಬಂತು ಪ್ರತಿಧ್ವನಿ
ಜಿಂಕೆ ಮೇಕೆ ಆಡು ಹೊತ್ತಿದೆ
ಬೆನ್ನ ಮೇಲೆ ಸಿಂಹಿಣಿ

ಇಡೀ ದಿನ ಕಾಡಿನಲ್ಲಿ
ಸಮಯ ಕಳೆದು ಖುಷಿಯಲಿ
ಮನೆಗೆ ಬಂದ ಪುಟ್ಟಿ ಕಣ್ಣಲಿ
ನೀರು ಹರಿಯಿತು ಕ್ಷಣದಲಿ

ಭಯವಿಲ್ಲದೆ ಕಾಡಿನಲ್ಲಿ
ಕಂಡೆ ಸ್ನೇಹ ಪ್ರೀತಿಯಾ
ಗುಮ್ಮ ಬರುವ ಅಂಜಿಕೆಯು
ಮನೆಯಲೇಕೆ ತಿಳಿಯೆ ನಾ? ■

